MR SPEAKER.—The question is.

"That the Karnataka Contingency Fund (Amendment) Bill, 1981 be passed."

The motion was adopted and the Bill was passed.

The Karnataka Municipalities (Amendment) Bill, 1981.

SRI DHARAM SINGH (Minister for Housing and Urban Development),—Sir, I beg to move.

"that the Karnataka Municipalities (Amendment) Bill, 1981 be taken into consideration."

The question was proposed.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಕಾರ್ಪೊರೇಷನ್‌ಗೆ ಸಂಬಂಧಪಟ್ಟಂತೆ ಇಂಥಾದ್ದೇ ಒಂದು ಅಮೆಂಡ್‌ಮೆಂಟನ್ನು ತಂದಿದ್ದೇವೆ. ಎಲ್ಲಾ ಮುನಿಸಿಪಾಲಿಟಿಗಳಲ್ಲಿ ಮತ್ತು ಕಾರ್ಪೊರೇಷನ್‌ನಲ್ಲಿ ವಸೂಲಾಗತಕ್ಕ ಒಟ್ಟು ಹಣದಲ್ಲಿ ೧೮ ಪರ್ಸೆಂಟ್ ಹಣವನ್ನು ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಖರ್ಚುಮಾಡಬೇಕೆಂದಿದ್ದರೂ, ಇನ್ನೂ ಅನೇಕ ಕಡೆಗಳಲ್ಲಿ ಈರೀತಿ ೧೮ ಪರ್ಸೆಂಟ್ ಹಣವನ್ನು ಖರ್ಚುಮಾಡುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ, ಟಿ. ಡಿ. ಬಿ. ಗಳಲ್ಲಿ, ಮುನಿಸಿಪಾಲಿಟಿಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಯಾವರೀತಿ ಹೆಲ್ತ್ ಕಮಿಟಿ, ಫೈನಾನ್ಸ್ ಕಮಿಟಿ ಎಂದು ಇರುತ್ತವೋ ಅದೇ ರೀತಿ ಒಂದು ಸೋಷಿಯಲ್ ಜಸ್ಟೀಸ್ ಕಮಿಟಿ ಇರಬೇಕೆಂದು ಈ ಒಂದು ತಿದ್ದುಪಡಿಯನ್ನು ಸಭೆಯ ಮುಂದೆ ತಂದಿದ್ದೇವೆ. ಇದನ್ನು ಮಾನ್ಯ ಸಭೆಯು ಸರ್ವಾನುಮತದಿಂದ ಒಪ್ಪಬೇಕೆಂದು ತಿಳಿಸಿಕೊಳ್ಳುತ್ತೇನೆ.

SRI A. LAKSHMISAGAR (Chickpet).—Mr. Speaker, Sir, under the Municipalities Act and also under the Corporations Act of 1976 there are various standing committees. These standing committees have been assigned with certain functions and they are expected to carry out those functions. I am making this submission in the context of my experience as a member of the Bangalore City Municipal Corporation for a term. Now, from out of the revenues of the local bodies, to the extent of 18% on Scheduled Castes and Scheduled Tribes to be is spent and that the municipalities have been directed to do so. Now for that purpose, in order to give meaning and content of incurring expenditure of 18% specifically for the welfare of the Scheduled Castes and Scheduled Tribes the Committee is thought of, and it is being added to the list of standing committees in the local bodies. This is the context in which this is thought of and the Bill is before us. Now this Committee is a social justice committee. Then what are the other Committees doing? Are they not doing social justice? Mr. Speaker, sir, what is the function of other committees? The totality of functions of the standing committees is also social justice. The entire fulcrum upon which we are function-

ing as Members of the Legislature, the main content is social justice. That is about the name of the social justice committee. Then, sir, now how are you going to spend 18% of the money in a city like Bangalore for the advancement of Scheduled Castes and Scheduled Tribes. Has the Hon'ble Minister got any year-wise data with him, furnishing information or data with areas or divisions where the Scheduled Castes and Scheduled Tribes people are residing and therefore, 18% could be expended there? How is he going to determine? In Bangalore city this difficulty has arisen. My hon. friend Sri I. P. D. Salappa says, he has spent moneys to the extent of 18% for the welfare of Scheduled Castes and Scheduled Tribes. In which area of Bangalore City the Minister is going to incur this expenditure?

The general feeling is that the slums are the areas where the scheduled castes and scheduled tribes people live. Sir, I should like to tell you from my experience and on my own verification that is not correct assumption. It is not the correct assessment. So, I would like to say most of the people who live in slums are people from outside the Karnataka and most of them are tamil dominated. Those people come to me and ask for a certificate to the effect that they belong to Scheduled Caste.

SRI Y. RAMAKRISHNA.—Sir, I would like to know whether the hon. Member is opposing the bill or supporting it.

SRI A. LAKSHMISAGAR.—My point is how are you going to incur the expenditure of 18%. My observations need not be confined to Bangalore City alone. I took it as an example. I only explained the practical difficulties faced by the Municipalities. The intended help of using 18% of the revenues of the municipalities or other corporations do not reach the Scheduled Caste and the Scheduled Tribe. My apprehension here is that it will not go to the SC/ST people because it is not possible to find out the areas.

ಶ್ರೀ ವೈ. ರಾಮಕೃಷ್ಣ:— ಸ್ವಾಮಿ, ಸುಮಾರು ೫೦ ಲಕ್ಷ ಜನ ಬೆಂಗಳೂರು ನಗರದಲ್ಲಿ ಇದ್ದಾರೆ. ನೂರಾರು ಸ್ಕೂಲುಗಳು ಕಾಲೇಜುಗಳು. ಹೈಸ್ಕೂಲುಗಳು ಇವೆ. ಅಲ್ಲಿ ಹರಿಜನ ಮಕ್ಕಳೂ ಸಹ ಓದುತ್ತಿದ್ದಾರೆ, ಅವರಿಗೆ ಬಟ್ಟೆಗಳನ್ನು ಪುಸ್ತಕಗಳನ್ನು ತೆಗೆದುಕೊಳ್ಳುವ ಸಲುವಾಗಿ ಸ್ಕಾಲರ್‌ಷಿಪ್ ಕೊಡುತ್ತಿದ್ದೇವೆ. ಸ್ಪೆಸಿಫೈ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಏತಕ್ಕೆ ಸ್ಪೆಸಿಫೈ ಮಾಡುವುದಕ್ಕಾಗುವುದಿಲ್ಲ ವೆಂದು ಕೇಳುತ್ತೇನೆ.

SRI A. LAKSHMISAGAR.—What is the main function of a civic body? If you are going to instruct or direct the municipalities to incur the expenditure on specified items that is a different matter. The main function of municipality or the local body is to attend to civic amenties of those people. It is not the obligatory function of a corporation or the municipality to run schools and colleges.

ಶ್ರೀ ವೈ. ರಾಮಕೃಷ್ಣ.—ಮುನಿಸಿಪಾಲಿಟಿಗಳಲ್ಲಿ ಮತ್ತು ಕಾರ್ಪೋರೇಷನ್‌ಗಳಲ್ಲಿ ಹೆಲ್ತ್ ಮತ್ತು ಎಜ್ಯುಕೇಷನ್ ಕಮಿಟಿಗಳೆಂದು ಇರುತ್ತವೆ. ಎಲ್ಲಿ ಬಡಮಕ್ಕಳು ಇರುತ್ತಾರೋ ಅಲ್ಲಿ ಖರ್ಚು ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಆದಕ್ಕಾಗಿ ಮೊದಲು ನಾನು ಕೇಳುವುದೇನೆಂದರೆ ಈ ಮಸೂದೆಯನ್ನು ಮಾನ್ಯ ಸದಸ್ಯರು ಆಪೋಸ್ ಮಾಡುತ್ತಿದ್ದಾರೋ ಅಥವಾ ಸ್ಪಷ್ಟೀಕರಿಸುತ್ತಿದ್ದಾರೋ ಅದನ್ನು ಮೊದಲು ಅವರು ಹೇಳಲಿ?.

SRI A. LAKSHMISAGAR.—I should like my learned friend to have patience. I will certainly indicate what I am going to do with this Bill. Your intentions may be good. But my apprehension is that this Bill is not going to help the persons to whom this benefit is meant. It does not reach them It is a known fact that the money spent by the municipalities or the Corporations does not reach SC/ST people. So, providing civic amenities is only the main function of the Municipalities and the Corporations. If it is so, what is that Social Justice Committee can do? I want this clarification from the Hon'ble Minister. If I wanted to oppose this Bill I would have said that I oppose this Bill.

MR. SPEAKER.—Please see clause (b) ... ."from time to time perform such functions as may be prescribed for securing social justice."

SRI A. LAKSHMISAGAR.—I agree but it cannot be outside the purview of the Municipalities Act. The Government cannot assume itself. the power of prescribing the functions to social justice committee. It cannot be done. They want to do something which is forbidden by law. Just now Mr. Moily was saying that his Government has taken measures to advance the living conditions of backward classes, Scheduled Castes, Oppressed, depressed as if they are the monopolists of doing things. Now, I only want the Government to spell out the manner in which they are going to spend these monies so that it reaches SC/STs. That is the point I am trying to make. If the Minister gives satisfactory explanation, well I accept it. If he doesn't give them I know the fate of the Bill which ultimately get the consent of the House, with a majority vote. This is my submission.

†ಶ್ರೀ ವಿ.ವಿ. ಪತ್ತಾರ್ (ಜಮಖಂಡಿ).–ಮಾನ್ಯ ಅಧ್ಯಕ್ಷರೇ ಅರ್ಬನ್ ಡೆವಲಪ್‌ಮೆಂಟ್ ಮತ್ತು ಹೌಸಿಂಗ್ ಮಂತ್ರಿಗಳು ತಂದಂಥ ಈ ಮಸೂದೆಯನ್ನು ಸ್ವಾಗತ ಮಾಡುತ್ತಾ ಕೆಲವು ಅಂಶಗಳನ್ನು ಹೇಳಬಯಸುತ್ತೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ಬಹುಶಃ ಬೆಂಗಳೂರಿನಲ್ಲಿರತಕ್ಕಂಥ ಸ್ಥಿತಿಯ ಬಗ್ಗೆ ಮಾತನಾಡಿದರು. ಆದರೆ ಸಣ್ಣ ಸಣ್ಣ ಪಟ್ಟಣಗಳಲ್ಲಿ ಸಾಕಷ್ಟು ಹರಿಜನರಿಗೆ ವಸತಿಗಳಿದ್ದರೂ ಅವರ ಸ್ಥಿತಿಗತಿಗಳನ್ನು ಸುದಾರಿಸಲಿಕ್ಕೆ ೧೦೦ಕ್ಕೆ ೧೮ ರಷ್ಟು ಹಣವನ್ನು ಖರ್ಚುಮಾಡಬೇಕೆಂಬ ಒಂದು ನಿಯಮ ವಿದ್ದರೂ ನಗರಸಭೆಗಳವರು ಪಾಲಿಸುತ್ತಿಲ್ಲ ಎನ್ನುವ ಮಾತನ್ನು ಈ ಸಭೆಯಲ್ಲಿ ಹೇಳುತ್ತಾ ಇದ್ದಾರೆ. ಜಮಖಂಡಿಯನ್ನೇ ಉದಾಹರಣೆಗಾಗಿ ತೆಗೆದುಕೊಂಡರೆ ಕಳೆದ ನಾಲ್ಕಾರು ವರ್ಷಗಳಿಂದ ೧೦೦ಕ್ಕೆ ೧೮ ರಷ್ಟು ಹಣವನ್ನು ಖರ್ಚುಮಾಡಿಲ್ಲ. ಪದೇ ಪದೇ ಈ ಮಾತನ್ನು ಸರ್ಕಾರದ ಗಮನಕ್ಕೆ ತಂದಿದ್ದರೂ ಸಹ ನಗರಸಭೆಯವರು ನಿಗದಿ ಪಡಿಸಿದ ಹಣವನ್ನು ಖರ್ಚುಮಾಡುತ್ತಿಲ್ಲ ಸುಮಾರು ಮೂರು ವರ್ಷ

ಗಳಿಂದ ಜಮಖಂಡಿಯಲ್ಲಿ ಹರಿಜನರು ಮನೆಗಳಿಲ್ಲದೆ ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ ಕೆಲವರಿಗೆ ಗುಂಡಿಸಲು ಸಹ ಇಲ್ಲದೆ ಇರತಕ್ಕಂಥ ಪರಿಸ್ಥಿತಿಯಲ್ಲಿದ್ದರೂ ಸಹ ಅಲ್ಲಿಯ ನಗರಸಭೆಯವರು ಖರ್ಚು ಮಾಡತಕ್ಕಂಥ ಹಣದಲ್ಲಿ ೧೮ ಪರ್ಸೆಂಟ್ ಹಣವನ್ನು ಕೊಟ್ಟಿಲ್ಲ. ಸರ್ಕಾರದವರು ಕೊಟ್ಟಿರತಕ್ಕಂಥ ಒಂದು ಸವಲತ್ತುಗಳನ್ನು ಈ ಜನಾಂಗಕ್ಕೆ ದೊರಕಿಸಿಕೊಡಲು ಇರತಕ್ಕಂಥ ಹಿಂದು ಸ್ಕ್ಯಾಂಡಿಂಗ್ ಕಮಿಟಿಯಾಗಲಿ ಹೆಲ್ತ್ ಕಮಿಟಿಯಾಗಲಿ ಇದ್ದರೂ ಸಹ ಅವು ಸೂಕ್ತವಾಗಿ ಕೆಲಸ ಮಾಡುತ್ತಿಲ್ಲದ ಕಾರಣ, ಇಂಥ ಒಂದು ಪರಿಸ್ಥಿತಿಯಲ್ಲಿ ಈ ಮಸೂದೆಯನ್ನು ತರಲಾಗಿದೆ.

೬–೦೦ ಪಿ.ಎಂ.

ಇದಕ್ಕೆ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಅಲ್ಲಿದ್ದಂತಹ ಶಹರುಗಳಲ್ಲಿದ್ದಂತಹ ನಗರಸಭೆಗಳು ಈ ಕೆಲಸಗಳನ್ನು ಮಾಡುತ್ತಾ ಇಲ್ಲದಿರುವಾಗ ಮತ್ತು ಈ ಶಾಸನಸಭೆಯ ಸದಸ್ಯರು ಹೇಳುತ್ತಿದ್ದರೂ ಸಹಾ ಅವರು ಮಾಡದೇ ಇರುತ್ತಿರುವಾಗ ಈ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡಬೇಕಾಗುತ್ತದೆ. ಈಗ ಆದಂತಹ ಒಂದು ಮಸೂದೆ ಕೇವಲ ನಗರಸಭೆಯ ಸದಸ್ಯರುಗಳನ್ನೇ ಒಳಗೊಂಡಿರುತ್ತದೆ. ಕೇವಲ ನಗರಸಭೆಯ ಸದಸ್ಯರುಗಳನ್ನು ಒಳಗೊಂಡ ಸಮಿತಿಯನ್ನು ಮಾಡಬೇಕೆಂದು ಉದ್ದೇಶಿಸಲಾಗಿದೆ. ಆ ಒಂದು ಸಮಿತಿಯಲ್ಲಿ ಆ ಭಾಗದಲ್ಲಿ ಆರಿಸಿದಂತಹ ಶಾಸಕರನ್ನೂ ಸಹಾ ಸೇರಿಸಿದರೆ ಬಹಳ ಒಳ್ಳೆಯದಾಗುತ್ತದೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದಾಗಿ ಸ್ಥಳದ ಜನಕ್ಕೆ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ತಿಳಿಸುತ್ತೇನೆ. ಅಧ್ಯಕ್ಷರೆ, ನಾವು ತಾಲ್ಲೂಕು ಬೋರ್ಡ್ ಸಂಸ್ಥೆಗಳನ್ನು ನೋಡುತ್ತಿದ್ದೇವೆ. ಅಲ್ಲಿ ಶಾಸಕರನ್ನು ಜವಾಬ್ದಾರಿ ಸದಸ್ಯರನ್ನಾಗಿ ಮಾಡಿದ್ದೀರಿ. ಅದು ಯಾತಕ್ಕೆಂದರೆ, ಹಳ್ಳಿಗಳ ಸುಧಾರಣೆಗಾಗಿ ನಿರ್ಮಿತವಾದಂತಹ ಈ ತಾಲ್ಲೂಕು ಬೋರ್ಡ್‌ಗಳು ಆ ಭಾಗದ ಶಾಸಕರನ್ನು ಒಳಗೊಂಡು ಕೆಲಸ ಮಾಡಬೇಕೆನ್ನುವ ಇಚ್ಛೆಯಿಂದ ಮಾಡಿದ್ದೀರಿ. ಆದುದರಿಂದ ಈ ೧೮ ಪರ್ಸೆಂಟ್ ಹಣವನ್ನು ಒದಗಿಸುವಾಗ, ನಿವೇಶನಗಳನ್ನು ಕೊಡುವಾಗ, ಮನೆಗಳನ್ನು ಕೊಡುವಾಗ, ಸ್ಥಳೀಯ ಜನರಿಗೆ ಸವಲತ್ತುಗಳನ್ನು ಒದಗಿಸುವಾಗ, ಸ್ಥಳೀಯ ಶಾಸಕರನ್ನು ಸಮಿತಿಯ ಸದಸ್ಯರನ್ನಾಗಿ ಮಾಡಬೇಕೆನ್ನುವ ಸಲಹೆಯನ್ನು ಮಾಡಿ, ಈ ಮಸೂದೆಗೆ ಪೂರ್ಣವಾದ ನನ್ನ ಬೆಂಬಲವನ್ನು ಕೊಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಧರ್ಮಸಿಂಗ್ (ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—ಅಧ್ಯಕ್ಷರೆ, ಈ ಮಸೂದೆಯ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್ ಹಾಗೂ ಮಾನ್ಯ ಪತ್ತಾರ್ ಅವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದರು, ಎಲ್ಲಾ ಕಡೆ ಮುನಿಸಿಪಾಲಿಟಿಗಳಲ್ಲೂ ಕೂಡ ಸ್ಟ್ಯಾಂಡಿಂಗ್ ಕಮಿಟಿ, ಬೇರೆ ಕಮಿಟಿಗಳು ಇವೆ, ಅವುಗಳು ಕೆಲಸಕಾರ್ಯಗಳನ್ನು ಮಾಡುತ್ತಿವೆ. ಆದ್ದರಿಂದ ತಿದ್ದುಪಡಿ ತರುವುದು ಅವಶ್ಯ ಇಲ್ಲ ಎಂದೂ ಆದರೂ ಕೂಡ ಏಕೆ ಸೋಶಿಯಲ್ ಜಸ್ಟೀಸ್ ಕಮಿಟಿಯನ್ನು ತರಬೇಕಾಗಿತ್ತೆಂದು ಪ್ರಸ್ತಾಪ ಮಾಡಿದ್ದಾರೆ. ೧೯೭೩–೭೪ ರಿಂದ ಇದು ಪ್ರಾರಂಭ ಆಗಿದ್ದು ಆಗಿನಿಂದ ಬಡ್ಜೆಟ್‌ನಲ್ಲಿ ಖರ್ಚು ಮಾಡಬೇಕಾದ ೧೮ ಪರ್ಸೆಂಟ್ ಹಣ ಏನು ಇದು ಆದು ಇನ್ನೂ ಖರ್ಚು ಆಗಿಲ್ಲ ಎಂದು ಈ ಬಗ್ಗೆ ಇನ್ವೆಸ್ಟಿಗೇಷನ್ ಮಾಡಿ ನೋಡಿದಾಗ ತಿಳಿಯಿತು. ಆಯವ್ಯಯದಲ್ಲಿ ಹರಿಜನಗಿರಿಜನರಿಗೆ ಸೌಕರ್ಯ ಒದಗಿಸುವ ೧೮ ಪರ್ಸೆಂಟ್ ಹಣ ಖರ್ಚಾಗಿಲ್ಲ. ಯಾವ ಕಾರ್ಪೊರೇಷನ್‌ನಲ್ಲೂ ಅಷ್ಟು ಹಣ ಖರ್ಚು ಆಗಿಲ್ಲ. ಈ ಎಲ್ಲಾ ಸಮಸ್ಯೆಗಳನ್ನು ಕಂಡುಹಿಡಿಯಲು ಇನ್‌ಕ್ವೈರಿ ಮಾಡಿಲ್ಲವೆಂದು ಕಂಡು ಹಿಡಿದು ಒಂದು ಸ್ಟ್ಯಾಂಡಿಂಗ್ ಕಮಿಟಿ ಮಾಡಬೇಕೆಂದೂ, ಸಾವಿರಾರು ವರ್ಷಗಳಿಂದ ಹರಿಜನಗಿರಿಜನರಿಗೆ ಸಿಗದೇ ಇರುವ ಸೌಲಭ್ಯವನ್ನು ಒದಗಿಸಿಕೊಡಲು ಒಂದು ಸೋಶಿಯಲ್ ಜಸ್ಟೀಸ್ ಕಮಿಟಿ ಮಾಡಬೇಕೆಂದು ಸರ್ಕಾರದ ಒಂದು ಉದ್ದೇಶ ಇದೆ. ಹಳ್ಳಿಗಳಲ್ಲಿ ಸಾಮಾನ್ಯ ಜನರಿಗೆ ಸಿಗುತ್ತಿರುವ ಸೌಲಭ್ಯಗಳು ಹರಿಜನಗಿರಿಜನರಿಗೆ ಸಿಗುತ್ತಾ ಇಲ್ಲ. ಇದನ್ನೆಲ್ಲಾ ತಿಳಿದುಕೊಳ್ಳುವ ಒಂದು ಜವಾಬ್ದಾರಿ ಈ ಸಮಿತಿಯ ಸದಸ್ಯರ ಮೇಲೆ ಇರುತ್ತದೆ. ಬಡ್ಜೆಟ್ಟಿನಲ್ಲಿ ಈ ಬಗ್ಗೆ ಖರ್ಚು ಮಾಡಬೇಕಾಗಿರುವ ಹಣದ ಬಗ್ಗೆ ಕೇಳುವ ಅಧಿಕಾರ ಇವರಿಗಿರುತ್ತದೆ. ಈ ಬಗ್ಗೆ ಕಾರ್ಪೊರೇಷನ್ ಏನಾಗಿದೆ ಎಂದು ಮಾನ್ಯ ಲಕ್ಷ್ಮೀಸಾಗರ್ ಅವರು ಕೇಳಿದರು. ೧೯೭೯–೮೦ರಲ್ಲಿ ಈ ಬಾಬಿಗಾಗಿ ೧,೧೦,೦೦,೦೦೦ ರೂಪಾಯಿಗಳು ಖರ್ಚು ಆಗಬೇಕಾಗಿದ್ದು ಕೇವಲ ೪೦ ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಲಾಗಿದೆ. ಈ ಹಣವನ್ನು ಹರಿಜನ

ಗಿರಿಜನರ ಕಲ್ಯಾಣ ಕಾರ್ಯಗಳಿಗಾಗಿ ಖರ್ಚು ಮಾಡಬೇಕಾಗಿತ್ತು. ಬೆಳಗಾಂ ಮತ್ತು ಹುಬ್ಬಳ್ಳಿ ಹಾಗೂ ಬೇರೆ ಕಡೆಗಳಲ್ಲೂ ಕೂಡ ೧೮ ಪರ್ಸೆಂಟ್ ಹಣವನ್ನು ಖರ್ಚು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಈ ಹಣ ಸರಿಯಾಗಿ ಖರ್ಚು ಆಗುವುದರ ಬಗ್ಗೆ, ಒಂದು ಕಮಿಟಿ ಇದ್ದರೆ ಒಳ್ಳೆಯದೆಂದು ಇದನ್ನು ತಂದಿದ್ದೇವೆ. ಆದ್ದರಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ. ಇನ್ನು ಪತ್ರಾರ್ ಅವರು ಈ ಸಮಿತಿಗೆ ಶಾಸಕರನ್ನು ಸದಸ್ಯರನ್ನಾಗಿ ನೇಮಿಸಬೇಕೆಂದರಂ. ನಗರಸಭೆಯಲ್ಲಿ ಚುನಾಯಿತ ಪ್ರತಿನಿಧಿಗಳಿದ್ದು ಅವರಿಗೆ ಪ್ರಾತಿನಿಧ್ಯ ಕೊಡಬೇಕಾಗುತ್ತದೆ. ಶಾಸಕರೂ ಸಹಾ ಈ ಬಗ್ಗೆ ತಮ್ಮ ಸೂಚನೆಗಳನ್ನು ಕೊಡಬಹುದು. ಆದರೆ ಈ ಸಮಿತಿಯಲ್ಲಿ ಶಾಸಕರನ್ನು ಹಾಕುವುದಕ್ಕೆ ಬರುವುದಿಲ್ಲವೆಂದು ಹೇಳಿ ಈ ತಿದ್ದುಪಡಿಗೆ ಎಲ್ಲರೂ ಸಮ್ಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

MR. SPEAKER —No, I put the consideration motion to vote. The question is.—

"That the Karnataka Municipalities (Amendment) Bill, 1981 be taken into consideration."

The motion was adopted

CLAUSES 2 AND 3

MR. SPEAKER.—As there are no amendments, I will put clauses 2 and 3 to vote. The question is.—

"That clauses 2 and 3 both inclusive do stand part of the Bill"

The motion was adopted

Clauses 2 and both inclusive were added to the Bill

CLAUSE 1 ETC

MR. SPEAKER.—The question is ;

"That clause 1, the Long Title, the Preamble and the Enacting Formula do stand part of the Bill."

The motion was adopted

clause 1, the Long Title, the Preamble and the Enacting Formula were added to the Bill

Motion to pass

SRI DHARAM SINGH (Hon. Minister for Housing and Urban Development).—Sir, I beg to move.—

"That the Karnataka Municipalities (Amendment) Bill, 1981 be passed"

MR. SPEAKER.—The question is.—

"That the Karnataka Municipalities (Amendment) Bill, 1981 be passed"

The motion was adopted and the Bill was passed

MR. SPEAKER.—Now, the House stands adjourned to meet tomorrow at 1.00 P.M.

The House adjourned at Five minutes past Six of the Clock to meet again at One of the Clock on Tuesday, the 10th March 1981.